

‘ನೀನು ತಾಯಿಯಾಗಿ ಸೋತಿದ್ದೀಯಾ ಎಂದು ತಾಯಂದಿರ ದಿನವಾದ ನಿನ್ನೆ ನನ್ನ ಮಗ ಹೇಳಿದ..’

—ಉಮ್ಮಳಿಸಿ ಬರುತ್ತಿದ್ದ ದುಃಖವನ್ನು ತಡೆಯುತ್ತಾ ಇಪ್ಪತ್ತು ವರ್ಷದ ಮಗನ ತಾಯಿಯಾದ ಗ್ರೆಟ್ಟಾ ಲೋಬೋ ಹೇಳಿದರು. ಸ್ವಲ್ಪ ಹೊತ್ತು ಅವಳಿಗೆ ದುಃಖವನ್ನು ಅನುಭವಿಸಲು ಬಿಟ್ಟು ನಂತರ ಕೇಳಿದೆ ‘ನಿಮ್ಮ ಮಗನ ಮಾತು ನಿಮ್ಮ ಮನಸ್ಸಿನಲ್ಲಿ ಆಳವಾದ ಗಾಯವನ್ನು ಮಾಡಿದೆ. ಮೇಲುನೋಟಕ್ಕೆ ಕ್ರೂರ ಎನ್ನಿಸಬಹುದಾದ ಅವನ ಮಾತು, ವರ್ತನೆಯ ಹಿಂದೆ ಎಷ್ಟೆಲ್ಲಾ ಮಾನಸಿಕ ತಳಮಳಗಳು ಇರಬಹುದಲ್ಲವೇ?’

ಗ್ರೆಟ್ಟಾರ ದುಃಖ ಆಕೆಯ ಹಿಡಿತವನ್ನು ಮೀರಿ ಕಣ್ಣೀರಿನ ಕೋಡಿಯಾಯಿತು. ಹೆಚ್ಚಾದ ದುಃಖ ಮಗನಿಂದ ತನಗಾದ ಅವಮಾನ, ನೋವುಗಳಿಂದ ಉಂಟಾದದ್ದೋ ಅಥವಾ ಮಗನ ಮಾನಸಿಕ ತಳಮಳಗಳ ಬಗೆಗೆ ಊಹಿಸಿಕೊಂಡಾಗ ಬಂದಿದ್ದೋ ಎಂದು ತಕ್ಷಣ ತಿಳಿಯುವುದು ಸಾಧ್ಯವಿರಲಿಲ್ಲ. ಆ ಹಂತದಲ್ಲಿ ಅದರ ಅಗತ್ಯವೂ ನನಗೆ ಕಾಣಲಿಲ್ಲ.

ಸಾಕಷ್ಟು ಶ್ರೀಮಂತಳಾದ ಗ್ರೆಟ್ಟಾ ದಂಪತಿಗೆ ಒಬ್ಬನೇ ಮಗ. ‘ಮಗ ಏನಾದ್ರೂ ಓದಲಿ ನಾನಂತೂ ಅವನ ಮೇಲೆ ಒತ್ತಡ ಹಾಕಲ್ಲ’ ಎಂದು ಎಲ್ಲರ ಬಳಿ ಹೇಳುತ್ತಿದ್ದರೂ ಅವನ ಅಂಕಗಳು 98ರಂದ 96ಕ್ಕೆ ಇಳಿದಾಗ ಗ್ರೆಟ್ಟಾರ ವರ್ತನೆಗಳು ಆಕೆಯ  ಆತಂಕ, ಅಸಹನೆಯನ್ನು ಪ್ರತಿಧ್ವನಿಸುತ್ತಿದ್ದವು. ಅಮ್ಮನ ನಿರಂತರ ನಿರೀಕ್ಷೆಯನ್ನು ತಲುಪಲಾರದ ಮಗ ಒಳಗಿನಿಂದ ಕುಸಿಯತೊಡಗಿದ. ವಿಜ್ಞಾನ ವಿಭಾಗವನ್ನು ಬಿಟ್ಟು ವಾಣಿಜ್ಯವನ್ನು ಆರಿಸಿಕೊಂಡರೂ ಅವನೊಳಗಿನ ಕುಸಿತ ನಿಲ್ಲಲಿಲ್ಲ. ಕೊನೆಗೆ ಕಾಲೇಜಿನಿಂದ ಪುಸ್ತಕ, ಹಾಲ್ ಟಿಕೆಟ್ ಎಲ್ಲವನ್ನೂ ಅಮ್ಮನೇ ತಂದುಕೊಟ್ಟರೂ ಅವನು ಪರಿಕ್ಷೆಗೆ ಹೋಗದೆ ತಪ್ಪಿಸಿಕೊಳ್ಳುತ್ತಿದ್ದ.

ಇದೊಂದು ಪ್ರಾತಿನಿಧಿಕ ಘಟನೆ ಮಾತ್ರ. ಹೀಗೆ ಮಕ್ಕಳ ಬಗೆಗಿನ ನೂರಾರು ಚಿಂತೆಗಳನ್ನು ಹೊತ್ತು ನನ್ನ ಸಹಾಯ ಕೇಳುವವರೆಲ್ಲರೂ ಅಮ್ಮಂದಿರೇ. ಅಪರೂಪಕ್ಕೆ ಬರುವ ಅಪ್ಪಂದಿರು ‘ನನಗೇನೂ ಮಕ್ಕಳ ಬಗ್ಗೆ ದೂರುಗಳಿಲ್ಲ ಸಾರ್. ಇವರಮ್ಮ ಹೇಳ್ತಾರೆ ಅಂತ ಕರಕೊಂಡು ಬಂದಿದೀನಿ’ ಎಂದು ಹೇಳಿರುವ ಸಂದರ್ಭಗಳೇ ಹೆಚ್ಚು. ಅಪ್ಪ– ಅಮ್ಮ ಮತ್ತು ಮಕ್ಕಳು ಎಲ್ಲರೂ ಒಟ್ಟಾಗಿ ನನ್ನೆದುರು ಕುಳಿತಾಗ ಅಪ್ಪಂದಿರ ದೂರುಗಳು ಮಕ್ಕಳಿಗಿಂತ ಹೆಚ್ಚಾಗಿ ಅಮ್ಮಂದಿರ ಮೇಲೆಯೇ ಇರುತ್ತವೆ.

ಹಾಗಿದ್ದರೆ ಅಮ್ಮಂದಿರು ಮಾತ್ರ ಮಕ್ಕಳನ್ನು ಹೆಚ್ಚು ಪ್ರೀತಿಸುತ್ತಾರೆಯೇ? ಅಪ್ಪಂದಿರು ತಮ್ಮ ಜವಾಬ್ದಾರಿಯನ್ನು ನಿಭಾಯಿಸುವುದಿಲ್ಲವೇ? ಮಕ್ಕಳನ್ನು